ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ; ಮೊನ್ನೆಯ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಗಾಗಿ ಕಳುಹಿಸಿದ್ದೇವೆ.

ಅಧ್ಯಕ್ಷರು: ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಅದಕ್ಕೆ ಬೇಕಾದರೆ ಸಮಯವನ್ನು ನಿಗದಿ ಮಾಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ತಾವು ಹೇಳಿರುವ ವಿಚಾರವನ್ನು ನಾವು ಒಪ್ಪುತ್ತೇವೆ. ಅದಕ್ಕೆ ನಾವು ತಲೆಬಾಗುತ್ತೇವೆ. ಈ ಪ್ರಶ್ನೆಯನ್ನು ತಾವು ಮುಂದಕ್ಕೆ ಹಾಕಿದ್ದೀರಿ. ಅದರಿಂದ ನಮಗೇನೂ ಉಪಯೋಗವಾಗುವುದಿಲ್ಲ. ಈಗ ಅವರು ಕೇಳಿರುವ ಉದ್ದೇಶವೇನು? ತಾವು ಅನುಮತಿ ಕೊಡಬೇಕು. ಇವತ್ತು 20ನೇ ತಾರೀಖು. ಇನ್ನು 10 ದಿವಸ ಈ ವರ್ಷದಲ್ಲಿ ಉಳಿದಿರುವುದು. ಮಾನ್ಯ ಮಂತ್ರಿಗಳು ಹೇಳುತ್ತಿರುವುದೇನು, ವಿಡಿ ಅಕೌಂಟ್‌ಗೆ ಟ್ರಾನ್ಸ್‌ಫರ್ ಮಾಡುತ್ತೇವೆ, ಇದಾದಮೇಲೆ ಖರೀದಿ ಮಾಡುತ್ತೇವೆಂದು ಹೇಳಿದ್ದಾರೆ. ಕಳೆದ ಆರು ತಿಂಗಳಿಂದ ಔಷಧಿಯೇ ಇರಲಿಲ್ಲವಲ್ಲ; ಅದಕ್ಯಾರು ಹೊಣೆ? ಸನ್ಮಾನ್ಯ ಮುಖ್ಯಮಂತ್ರಿಗಳು ಏಕೆ ಹೀಗಾಯಿತು ಎಂದು ವಿಚಾರಣೆ ಮಾಡಿಸಬೇಕು. ಮಾನ್ಯ ಸದಸ್ಯರ ಉದ್ದೇಶವೇನು? ನಮಗೆ ಪ್ರಶ್ನೆಗಳನ್ನು ಕೇಳಿ ಪ್ರಚಾರ ತೆಗೆದುಕೊಳ್ಳಬೇಕೆನ್ನುವ ಉದ್ದೇಶವಿಲ್ಲ. ಇವತ್ತು ಇಲಾಖೆಯವರು ಹಣವನ್ನು ಒದಗಿಸಿದ್ದಾರೆ. ಅಧಿಕಾರಿಗಳು ತಪ್ಪು ಮಾಡಿದ್ದಾರೋ? ಯಾವ ಉದ್ದೇಶದಿಂದ ಎಂದು ಗೊತ್ತಾಗಬೇಕಲ್ಲ. ಆ ಕಾರಣದಿಂದ ತಾವು ಈ ಬಗ್ಗೆ ನಾಳೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ಆಯಿತು ಬಿಡಿ.

ಲೋಕೋಪಯೋಗಿ ಮುಖ್ಯ ರಸ್ತೆಗಳು

9(240)

ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ನಿಗಧಿಗೊಳಿಸಿದ ಪ್ರಕಾರ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ

ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಇತರೆ ಜಿಲ್ಲಾ ಮುಖ್ಯ ರಸ್ತೆಗಳು ಎಷ್ಟು ಅಗಲ ಇರಬೇಕು? (ಸಂಪೂರ್ಣ ವಿವರ ನೀಡುವುದು)

ಆ) ಸರ್ಕಾರದವರು ನಿಗಧಿಗೊಳಿಸಿದ ಅಗಲವನ್ನು ರಸ್ತೆಗಳಿಗೆ ಸರಿಯಾಗಿ ಅಳವಡಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಭಾರತ ರಸ್ತೆ ಕಾಂಗ್ರೇಸ್‌ರವರು ಮಾಡಿರುವ ಶಿಪಾರಸ್ಸಿನಂತೆ ರಸ್ತೆಗಳ ಅಗಲವನ್ನು ಈ ಕೆಳಕಂಡಂತೆ ಅಳವಡಿಸಲಾಗಿದೆ.

೧. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿ ೧೨.೦೦ ಮೀಟರ್

೨. ಜಿಲ್ಲಾ ಮುಖ್ಯ ರಸ್ತೆಗಳು ೯.೦೦ ಮೀಟರ್

೩. ಇತರೆ ಜಿಲ್ಲಾ ರಸ್ತೆಗಳು ೯.೦೦ ದ್ವಿಪಥ ಮೀ ೭.೫೦ ಮೀಟರ್

೪. ಗ್ರಾಮೀಣ ರಸ್ತೆ (ಏಕಪಥ) ೭.೫೦ ಮೀ (ಏಕಪಥ)

ಆ) ಅಳವಡಿಸಲಾಗಿದೆ.

ಶ್ರೀ ಪಿ.ಹೆಚ್.ಪೂಜಾರ್: ಮಾನ್ಯ ಅಧ್ಯಕ್ಷರೆ, ಈ ಹಿಂದಿನ ಸದನದಲ್ಲಿ ಕೂಡ ಇದೇ ಪ್ರಶ್ನೆಯನ್ನು ಕೇಳಲಾಗಿತ್ತು. 15-7-96ರಂದು ಈ ಸದನದಲ್ಲಿ ಅಂದಿನ ಸಚಿವರಾದವರು ಉತ್ತರ ಕೊಟ್ಟಿದ್ದರು. ''ಸರ್ಕಾರದವರು ನಿಗದಿಗೊಳಿಸಿದ ಅಗಲವನ್ನು ರಸ್ತೆಗಳಿಗೆ ಸರಿಯಾಗಿ ಅಳವಡಿಸಲಾಗಿದೆ ಎಂದು. ಐಆರ್‌ಸಿ ಪರಿಮಾಣಗಳು 1978ರಲ್ಲಿ ಜಾರಿಗೆ ಬಂದಿರುತ್ತವೆ. ಈ ಅವಧಿಗೆ ಮುನ್ನ ರಾಜ್ಯದಲ್ಲಿನ ಹೆದ್ದಾರಿ ಹಾಗೂ ಮುಖ್ಯ ರಸ್ತೆಗಳು ವಿವಿಧ ಅಗಲ ಬಂದಿದ್ದು ಮೇಲಿನ ಅಳತೆಗೆ ಅನುಗುಣವಾಗಿರುವುದಿಲ್ಲ. ಈ ರಸ್ತೆಗಳನ್ನು ಅವುಗಳಲ್ಲಿನ ಸಂಚಾರಮಟ್ಟ ಪ್ರಾಮುಖ್ಯತೆ ಹಾಗೂ ಲಭ್ಯವಿರುವ ಅನುದಾನವನ್ನು ಗಮನಿಸಿ ಕ್ರಮೇಣ ಹಂತ ಹಂತವಾಗಿ ಅಗಲಗೊಳಿಸಲಾಗುವುದು ಎನ್ನುವ ಉತ್ತರವನ್ನು ಕೊಟ್ಟಿದ್ದರು. ಇವತ್ತು ನಮಗೆ ಒಂದು ಸಂಶಯ ಕಾಡುತ್ತಿದೆ. ಸನ್ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೋ ಹೇಗೆ? ಅದು ಸರಿಯೋ, ಇದು ಸರಿಯೋ ಎಂದು ಹೇಳಬೇಕು.

ಶ್ರೀ ಆರ್.ಧರ್ಮಸಿಂಗ್ ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಇವತ್ತು ಸದನದಲ್ಲಿ ತಮಗೇನು ಉತ್ತರವನ್ನು ಒದಗಿಸಿದ್ದೇನೆ, ಇದೇ ಸತ್ಯವಾದುದು.

ಶ್ರೀ ಪಿ.ಹೆಚ್.ಪೂಜಾರ್: ಮಾನ್ಯ ಅಧ್ಯಕ್ಷರೇ, ರಸ್ತೆ ಅಗಲ ಮಾಡುವ ಬಗ್ಗೆ ಯಾರದೂ ತಕರಾರು ಇಲ್ಲ. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಈ ರೀತಿ ಜನವಸತಿ ಇರುವ ಕಡೆಗಳಲ್ಲಿ ಎಲ್ಲೆಲ್ಲಿ ಈ ರಸ್ತೆಗಳು ಹಾಯುತ್ತವೋ, 20 ಸಾವಿರಕ್ಕಿಂತ ಹೆಚ್ಚು ಜನವಸತಿ ಇರುವ ನಗರ ಇರಬಹುದು, ಅಥವಾ ಗ್ರಾಮೀಣಭಾಗ ಇರಬಹುದು, ಅಂಥಲ್ಲಿ ನಾವು ರಸ್ತೆಗಳನ್ನು ಹಾಯಗೊಡುವುದಿಲ್ಲ ಎಂದು ಭರವಸೆಯನ್ನು ಹಿಂದಿನ ಮಾನ್ಯ ಸಚಿವರು ಕೊಟ್ಟಿದ್ದರು. ಅದೇ ರೀತಿ ಒಂದು ವೇಳೆ ಇದು ಆಗುವ ಸಂದರ್ಭ ಬಂದಾಗ ಅವರಿಗೆ ಪರಿಹಾರವನ್ನು ಸಹಿತ ಕೊಡುತ್ತೇವೆ ಎಂದು ಭರವಸೆಯನ್ನು ಹಿಂದಿನ ಸಚಿವರು ಕೊಟ್ಟಿದ್ದರು. ಸನ್ಮಾನ್ಯ ಸಚಿವರು ಇದರ ಬಗ್ಗೆ ವರದಿ ನೀಡಬೇಕು. ಪರಿಹಾರವನ್ನು ಅಂಥ ಪ್ರಮೇಯದಲ್ಲಿ ಕೊಡುತ್ತೀರೋ ಹೇಗೆ? ಎರಡನೆಯದು, ನಮ್ಮ ಬಾಗಲಕೋಟೆ ಜಿಲ್ಲೆಯಾದ್ಯಂತ ಹುನುಗುಂದ್, ಶೀರೂರ್, ಬಾಗಲಕೋಟೆ, ತುಳಸೀಗಿರಿ, ಲೋಕಾಪುರ ಈ ಮುಂತಾದ ಕಡೆ ರಾಜ್ಯ ಹೆದ್ದಾರಿಯನ್ನು ರಾಯಚೂರು ಬೆಳಗಾಂ ಮಧ್ಯೆ ಕೂಡಿಸುವಂಥದ್ದು ಇದರ ಬಗ್ಗೆ 3-4 ತಿಂಗಳಿಂದ ವಿಶೇಷವಾಗಿ ಕೆಲಸ ನಡೆದಿದೆ. ಅಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಳೆದುಕೊಳ್ಳುವ ಒಂದು ಪ್ರಮೇಯ ಜನರಲ್ಲಿ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ, ಬೈಪಾಸ್ ರೋಡು ಚೀಪರ್ ಆಗುತ್ತವೆಯೋ ಹೇಗೆ? ಒಂದುವೇಳೆ ನಗರದಲ್ಲಿ ಹಾಯ್ದುಹೋಗುವ ಸಂದರ್ಭ ಬಂದಾಗ, ಪಿಡಬ್ಲ್ಯೂಡಿ ರಸ್ತೆ ಹಾಯ್ದುಹೋಗುವ ಸಂದರ್ಭ ಬಂದಾಗ ನಗರದ ಇನ್ನುಳಿದ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿ ಪುರಸಭೆ ರಸ್ತೆ ಇರುತ್ತದೆ; ನಗರದಲ್ಲಿ ಹಾಯ್ದುಹೋಗುವ ಪಿಡಬ್ಲ್ಯೂಡಿ ರಸ್ತೆಗಳನ್ನು ಅಗಲೀಕರಣ ಮಾಡುವ ಸಂದರ್ಭ ಬಂದಾಗ ಎಲೆಕ್ಟ್ರಿಕ್ ಕಂಬಗಳನ್ನು ಹಿಂದಕ್ಕೆ ಸರಿಸಿ ಟಾರ್ ಮಾಡಿಸಿದರೆ ಆ ರಸ್ತೆ ಸರಿಯಾಗಿ ಆಗುವುದಿಲ್ಲವೇ, ಹೇಗೆ? ಇದರ ಬಗ್ಗೆ ಸನ್ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ಮೊನ್ನೆ ನಾನು ಬಾಗಲಕೋಟೆಗೆ ಹೋಗಿದ್ದೆ. ಶಾಸಕರ್ಯಾರು ಸಿಗಲಿಲ್ಲ. ನಾನು ಮುಧೋಳ್, ಮತ್ತು ಮಹಾಲಿಂಗಪುರ ರಸ್ತೆಗಳಲ್ಲಿ ಬರುವ ಜನರಿಗೆ ಏನು ತೊಂದರೆಯಾಗುತ್ತಿದೆ, ಈ ರಸ್ತೆ ಅಗಲದಿಂದ ಇವತ್ತು ರಾಜ್ಯದಲ್ಲಿ ಬಹಳಷ್ಟು ಕಟ್ಟಡಗಳು ಹೋಗುತ್ತವೆ ಎನ್ನುವ ಅನುಮಾನಗಳು ಬರುತ್ತಿವೆ. ಆದರೂ ಕೂಡ ಅದರ ಬಗ್ಗೆ ನಾವು ಆಲ್ಟರ್‌ನೇಟಿವ್ ಆಗಿ ವಿಚಾರವನ್ನು ಮಾಡುತ್ತಿದ್ದೇವೆ; ಯಾವ ರೀತಿ ಬೈಪಾಸ್ ರಸ್ತೆ ಮಾಡಬೇಕು ಎಂದು ನೋಡುತ್ತಿದ್ದೇವೆ. ಎಲ್ಲಿ ಆಗುವುದಿಲ್ಲ, ಅದರ ಬಗ್ಗೆ ಸಹ ನೋಡುತ್ತಿದ್ದೇವೆ. ಇವತ್ತೇನಾಗಿದೆ, ಕಟ್ಟುನಿಟ್ಟಾಗಿ ವಿಶ್ವಬ್ಯಾಂಕ್‌ನ ನೆರವಿನಿಂದ ರಸ್ತೆಗಳನ್ನು ಮಾಡುವ ರೀತಿಯಲ್ಲಿ ಇದರ ಬಗ್ಗೆ ಹೈಕೋರ್ಟ್ ಕೂಡ ಆದೇಶವನ್ನು ಕೊಟ್ಟಿದೆ. ಎಲ್ಲಿ ಎನ್‌ಕ್ರೋಚ್‌ಮೆಂಟ್ ಇದೆ, ಅದನ್ನು ತೆಗೆಯಬೇಕೆಂದು ಹೇಳಿದ್ದಾರೆ. ಇದು ಬಹಳ ದೊಡ್ಡದಾದ ಕೆಲಸ. ಕಟ್ಟಡಗಳನ್ನು ಎಲ್ಲಾ ಕಡೆಗೆ ನಾವು ಕೆಡುವುದಕ್ಕೆ ಹೋದಾಗ ಸಾಕಷ್ಟು ಜನರಿಗೆ

ಅದರಿಂದ ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ನಾನು ಮೊನ್ನೆ ತೀರ್ಥಹಳ್ಳಿಗೆ ಕೂಡ ಹೋಗಿದ್ದೆ. ಅಲ್ಲಿ ಕೂಡ ಅದು ಪಟ್ಟಣದಲ್ಲಿ ಹೋಗಬಾರದು, ಬೇರೆ ಕಡೆಗೆ ಬೈಪಾಸ್ ಮಾಡಬೇಕೆನ್ನುವ ಬಗ್ಗೆ ಸಮಗ್ರವಾದ ವಿಚಾರಗಳು ಸರ್ಕಾರದ ಎದುರಿಗಿದೆ. ಇದಕ್ಕೆ ವ್ಯವಸ್ಥಿತವಾಗಿ ನಾವು ವಿಚಾರ ಮಾಡುತ್ತಿದ್ದೇವೆ.

ಶ್ರೀ ಪಿ.ಹೆಚ್.ಪೂಜಾರ್: ಇಂಥ ಸಂದರ್ಭದಲ್ಲಿ ಸರ್ಕಾರ ಪರಿಹಾರವನ್ನು ಕೊಡುತ್ತಾರೋ ಹೇಗೆ ಎಂದು ತಿಳಿಸಬೇಕು.

ಶ್ರೀ ಆರ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ಪರಿಹಾರವನ್ನು ಕೊಡುವುದು ಬಹಳ ದೊಡ್ಡದಾಗಿದೆ. ಏಕೆಂದರೆ ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಗೆ ಹೆದ್ದಾರಿಗಳನ್ನು ಮಾಡಬೇಕಾಗಿದೆ. ನಾನು ಒಂದು ಸ್ಟಡಿ ಟೀಮನ್ನು ಆಂಧ್ರಪ್ರದೇಶಕ್ಕೆ ಮತ್ತು ಮಹಾರಾಷ್ಟ್ರಕ್ಕೂ ಕಳುಹಿಸಿದ್ದೆ. ಬೇರೆ ರಾಜ್ಯಗಳಲ್ಲಿ ಯಾವ ರೀತಿಯಾಗಿ ರಸ್ತೆಗಳನ್ನು ಅಗಲ ಮಾಡುತ್ತಿದ್ದಾರೆ, ಅವರಿಗೆ ಏನೇನು ತೊಂದರೆಗಳು ಬರುತ್ತಿವೆ, ಅವರುಗಳು ಯಾವ ರೀತಿಯಾಗಿ ಪರಿಹಾರವನ್ನು ಕೊಡುತ್ತಿದ್ದಾರೆ ಎಂದು ಹೇಳಿ ಎರಡು ಟೀಮಗಳು ಹೋಗಿ ಅವರು ಕೂಡ ವರದಿಯನ್ನು ಕೊಟ್ಟಿದ್ದಾರೆ. ನಾವು ಎಲ್ಲೆಲ್ಲಿ ಕಟ್ಟಡಗಳನ್ನು ಕೆಡವಿ ಹಾಕುತ್ತೇವೆ, ಅಲ್ಲಿ ಅವರಿಗೆ ನಾವು ಪರಿಹಾರವನ್ನು ಕೊಡಬೇಕಾಗುತ್ತದೆ. ಇದು ಬಹಳ ದೊಡ್ಡದಾದ ಸಮಸ್ಯೆ. ಅದರ ಬಗ್ಗೆ ಕೂಡ ವಿಚಾರ ಮಾಡುತ್ತೇವೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಗಳನ್ನು ಅಗಲ ಮಾಡುವ ಕೆಲಸ, ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಅದೇ ರೀತಿ ರಾಜ್ಯ ಹೆದ್ದಾರಿಗಳಲ್ಲೂ ಸಹಾ ಅನಧಿಕೃತವಾಗಿ ಕೆಲವು ಕಡೆ ನೀವು ಟಾರ್‌ನ್ನು ಎಲ್ಲಿಯವರೆಗೆ ಮಾಡಿದ್ದೀರೊ ಅಲ್ಲಿಯವರೆಗೂ ಕಟ್ಟಗಳ್ನು ಕಟ್ಟಿಕೊಂಡು ಬಂದಿರುವುದು ಇದೆ. ವಾಹನಗಳಿಗೆ ಬಹಳ ಅಡ್ಡಿಯುಂಟಾಗುವ ಸಂದರ್ಭಗಳು ಕೂಡ ಇವೆ. ರಾಷ್ಟ್ರೀಯ ಹೆದ್ದಾರಿಗಳನ್ನು ಯಾವ ರೀತಿ ಅಗಲ ಮಾಡತಕ್ಕಂಥದ್ದು, ಅನಧಿಕೃತವಾದ ಕಟ್ಟಡಗಳನ್ನು ಒಡೆಸುವ ಕೆಲಸವನ್ನು ತಾವು ಮಾಡಿಸುತ್ತಿದ್ದೀರಿ; ಅದೇ ಕೆಲಸವನ್ನು ರಾಜ್ಯ ಹೆದ್ದಾರಿಗಳಲ್ಲೂ ಮಾಡಿಸುತ್ತಾರೆಯೇ? ಮತ್ತು ತಾವು ಪರಿಹಾರ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಅನಧಿಕೃತವಾಗಿ ಹತ್ತಾರು ವರ್ಷಗಳಿಂದ ಸರ್ಕಾರದ ಸ್ವತ್ತನ್ನು ಬಳಕೆ ಮಾಡಿಕೊಂಡಿದ್ದಾರೆ. ಅಂಥವರಿಗೆ ನ್ಯಾಯವಾಗಿ ಜುಲ್ಮಾನೆ ಹಾಕಬೇಕು. ಅದಕ್ಕೆ ಬದಲಾಗಿ ಅಂಥವರಿಗೂ ಪರಿಹಾರವನ್ನು ಕೊಡುತ್ತಿದ್ದೀರೊ ಹೇಗೆ? ಈ ರಾಜ್ಯ ಹೆದ್ದಾರಿಗಳಲ್ಲಿ ಅನಧಿಕೃತವಾದ ಕಟ್ಟಡಗಳು ಬಂದಿರಬಹುದು, ಅದನ್ನು ತೆರವುಗೊಳಿಸತಕ್ಕ ಕೆಲಸಗಳನ್ನು ಎಷ್ಟನೇ ತಾರೀಖಿನ ಒಳಗಾಗಿ ತಾವು ಮುಗಿಸುತ್ತೀರಿ?

ಶ್ರೀ ಆರ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ಈಗ ಪರಿಹಾರವನ್ನು ಕೊಡುವುದು

ಎಲ್ಲ ಕಡೆಗಲ್ಲ; ಮತ್ತು ಅಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿಸಿದ್ದರೆ ಅವರಿಗೆ ಪರಿಹಾರ ಕೊಡಬೇಕೆಂದು ಸಹ ಇಲ್ಲ. ಈಗಾಗಲೇ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳನ್ನು ಅಗಲ ಮಾಡುವ ರೀತಿಯಲ್ಲಿ ನಮ್ಮ ರಾಜ್ಯ ಹೆದ್ದಾರಿ 1964ರ ಆ್ಯಕ್ಟ್ ಏನಿದೆ, ಆ ಪ್ರಕಾರ ಈಗಾಗಲೇ ನೋಟಿಫಿಕೇಷನನ್ನು 12 ಪಟ್ಟಣಗಳಲ್ಲಿ ಕೊಟ್ಟಿದ್ದೇವೆ. ಅದು ಕೂಡ ಪ್ರೊಸೆಸ್ ಪ್ರಾರಂಭವಾಗಿದೆ. ಅದನ್ನು ಕೂಡ ಈ ವರ್ಷದ ಅವಧಿಯಲ್ಲಿ ಮಾಡುವ ಒಂದು ವಿಚಾರ ಸರ್ಕಾರ ಎದುರಿಗಿದೆ.

ಬೆಂಗಳೂರು ಮೈಸೂರು ಮಧ್ಯೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣ.

10(144)

ಶ್ರೀ ಆತ್ಮಾನಂದ.ಎಂ.ಎಸ್. (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಪ್ರಶ್ನೆಗಳಿಗೆ ಉತ್ತರ ತಿಳಿಸುವರೆ?

ಅ) ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆಯು ಯಾವು ಹಂತದಲ್ಲಿದೆ?

ಆ) ಈ ಯೋಜನೆಯ ರೂಪುರೇಷೆಗಳೇನು?

ಇ) ಈ ಯೋಜನೆಯಲ್ಲಿ ಸರ್ಕಾರದ ಪಾತ್ರವೇನು?

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು):

ಅ) ಭೂಸ್ವಾಧೀನ ಹಂತದಲ್ಲಿದೆ.

ಆ) ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ (ಬಿಎಂಐಸಿಪಿ) ಯೋಜನೆಯು ಈ ಕೆಳಕಂಡ ರೂಪುರೇಷೆಗಳನ್ನು ಒಳಗೊಂಡಿದೆ.

ಅ) 44 ಕಿಮಿ. ಉದ್ದದ ವರ್ತುಲ ರಸ್ತೆಯು ರಾ.ಹೆ.ಗಳಾದ 7 ಮತ್ತು 4ಕ್ಕೆ ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಂಪರ್ಕ ಕಲ್ಪಿಸುತ್ತದೆ.

ಆ) 9.1 ಕಿಮೀ ಲಿಂಕ್ ರಸ್ತೆಯು ವರ್ತುಲ ರಸ್ತೆ ಮತ್ತು ವೇಗದ ಹೆದ್ದಾರಿಯನ್ನು ನಗರದ ಮಧ್ಯಭಾಗಕ್ಕೆ 3 ಕಿಮೀ ಉದ್ದದ ಎಲಿವೇಟೆಡ್ ರಸ್ತೆಯ ಮೂಲಕ ಸಂಪರ್ಕಿಸುತ್ತದೆ.

ಇ) 111 ಕಿಮೀ. ವೇಗದ ರಸ್ತೆಯು ಬೆಂಗಳೂರು ಮತ್ತು ಮೈಸೂರು